ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 11-6-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ :<br><br>ಜಾಥಾ ಉದ್ಘಾಟನೆ:<br><br>ಪಿ.ಟಿ. ಪರಮೇಶ್ವರ ನಾಯ್ಕ್, ಕಾರ್ಮಿಕ ರಾಜ್ಯ ಸಚಿವರು. | 12-06-2015<br>ಶುಕ್ರವಾರ<br>ಬೆಳಿಗ್ಗೆ<br>9-00 ಗಂಟೆಗೆ | ಸ್ವಾತಂತ್ರ್ಯ ಉದ್ಯಾನವನ, ಬೆಂಗಳೂರು, |
| | ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ :<br><br>ಕಾರ್ಯಕ್ರಮದ ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><br>ಬದ್ಧತಾ ಪ್ರಮಾಣ ವಚನ ಬೋಧನೆ:<br><br>ಪಿ.ಟಿ. ಪರಮೇಶ್ವರ ನಾಯ್ಕ್, ಕಾರ್ಮಿಕ ರಾಜ್ಯ ಸಚಿವರು.<br><br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್, ವಾರ್ತಾ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಖಾತೆ ಸಚಿವರು. | 12-06-2015<br>ಶುಕ್ರವಾರ<br>ಬೆಳಿಗ್ಗೆ<br>11-00 ಗಂಟೆಗೆ | ಜ್ಞಾನಜ್ಯೋತಿ ಸಭಾಂಗಣ,<br>ಅರಮನೆ ರಸ್ತೆ,<br>ಬೆಂಗಳೂರು. |
| 2. | **International Day Against Child Labour"**<br><br>**Inauguration by:**<br><br>**Justice Sri N.K. Patil,** | **12-06-2015**<br>**Friday**<br>**at**<br>**8-45 AM** | **Auditorium Chirst School Campus, Bengaluru** |

| | | | |
|---|---|---|---|
| | **Judge, High Court of Karnataka.** | | |
| ೩ | <u>ಪತ್ರಿಕಾ ಗೋಷ್ಠಿ:</u><br><u>ಕೃಷ್ಣ ಬೈರೇಗೌಡ</u><br><u>ಕೃಷಿ ರಾಜ್ಯ ಸಚಿವರು</u> | 12-06-2015<br>ಶುಕ್ರವಾರ<br>ಮಧ್ಯಾಹ್ನ<br>01-00 ಗಂಟೆಗೆ | ಕೊಠಡಿ ಸಂಖ್ಯೆ ; 244<br>ಕೃಷಿ ಸಚಿವರ ಕಛೇರಿ<br>2ನೇ ಮಹಡಿ<br>ವಿಕಾಸ ಸೌಧ<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಜೂನ್ 15 ರಂದು ಪೂರಕ ಪರೀಕ್ಷೆ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ಕರ್ನಾಟಕ ಉಚ್ಚ ಶಾಲೆ-ಕೆ.ಓ.ಎಸ್. ಪೂರಕ ಪರೀಕ್ಷೆಯನ್ನು ದಿನಾಂಕ: 15-06-2015 ರಿಂದ 24-06-2015 ರವರೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾಗುವುದೆಂದು ತಿಳಿಸಿದೆ.

ಪ್ರವೇಶ ಪತ್ರಗಳನ್ನು ಎಲ್ಲಾ ಕೆ.ಓ.ಎಸ್. ಕಲಿಕಾ ಕೇಂದ್ರಗಳಿಗೆ ಕಳುಹಿಸಲಾಗಿದೆ. ವಿದ್ಯಾರ್ಥಿಗಳು ಸಂಬಂಧಿಸಿದ ಕರ್ನಾಟಕ ಮುಕ್ತ ಶಾಲಾ ಕಲಿಕಾ ಕೇಂದ್ರಗಳಿಂದ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳುವಂತೆ, ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## SUPLIMENTARY EXAMINATION FROM 15TH JUNE

Bangalore, June 11, (Karnataka Information)

Karnataka OPen School K.O.S. Suplimentary Examination will be conducted from 15-06-2015 to 24-06-2015 by Karnataka Secondary Education Examination Board (Other Exams). Admission Tickets have been

despatched to all the Karnataka Open School. K.O.S. Study Centers. Students are informed to collect the same from the concerned Karnataka Open School K.O.S. Study Centres as per the statement of Director (Other Exams), Karnataka Secondary Education Bangalore.

Babu:gpr

## ಧಾರ್ಮಿಕ ದತ್ತಿ ಇಲಾಖೆಯಲ್ಲಿ ಆನ್ ಲೈನ್ ಸೌಲಭ್ಯ – ಟಿ.ಬಿ.ಜಯಚಂದ್ರ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯಡಿ ಬರುವ ಪ್ರಮುಖ ದೇಗುಲಗಳಲ್ಲಿ ಆನ್‌ಲೈನ್ ಸೇವೆ ಪ್ರಾರಂಬಿಸಿಲಾಗಿದೆ ಎಂದು ಕಾನೂನು ಪಶುಸಂಗೋಪನಾ ಹಾಗೂ ಧಾರ್ಮಿಕ ಪತ್ರ ಇಲಾಖಾ ಸಚಿವರಾದ ಟಿ.ಬಿ.ಜಯಚಂದ್ರ ಅವರು ತಿಳಿಸಿದರು.

ವಿಧಾನ ಸೌಧದ ಸಮಿತಿ ಕೊಠಡಿಯಲ್ಲಿ ಧಾರ್ಮಿಕ ದತ್ತಿ ಇಲಾಖೆ ಹಾಗೂ ಇ– ಆಡಳಿತ ಇಲಾಖೆಯ ಸಹಯೋಗದೊಂದಿಗೆ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆನ್ ಲೈನ್ ಸೇವೆತೆ ಚಾಲನೆ ನೀಡಿ ಮಾತನಾಡಿದ ಸಚಿವರು ಒಂದು ಕೋಟಿ ರೂಗೂ ಹೆಚ್ಚು ಆದಾಯ ಹೊಂದಿರುವ ರಾಜ್ಯದ ಹನ್ನೊಂದು ದೇವಸ್ಥಾನಗಳನ್ನು ಇನ್ನು ಮುಂದಿ ಬೆಂಗಳೂರು ಒನ್‌ನಲ್ಲಿ ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸಬಹುದಾಗಿದೆ ಎಂದರು.

ಈಗಾಗಲೇ ರಾಜ್ಯದ ಕೆಲವು ಪ್ರಮುಖ ದೇವಾಲಯಗಳಲ್ಲಿ ಆನ್‌ಲೈನ್ ಲಭ್ಯವಿದ್ದು ಮುಂದಿನ ಹಂತದಲ್ಲಿ ಪ್ರಮುಖ ದೇವಸ್ಥಾನಗಳನ್ನು ಈ ವ್ಯಾಪ್ತಿಗೆ ಸೇರಿಸಲಾಗುವುದು ಎಂದು ಮಾತನಾಡಿದರು. ರಾಜ್ಯದಲ್ಲಿ 34,563 ಮುಜರಾಯಿ ದೇವಸ್ಥನಗಳಿದ್ದು ದೇಶ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಭಕ್ತಾಧಿಗಳು ದೇವಸ್ಥಾನಕ್ಕೆ ಬರುತ್ತಾರೆ.

ಆದರೆ ದೇವರು ಹಾಗೂ ಸೇವೆಗಳ ಹೆಸರಿನಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿ ಭಕ್ತಾಧಿಗಳಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವ ಸಲುವಾಗಿ ಈ ಆನ್ ಲೈನ್ ಸೇವೆಗಳನ್ನು ಪ್ರಾರಂಭಿಸಲಾಗಿದೆ ಎಂದ ಶ್ರೀ ಟಿ.ಬಿ. ಜಯಚಂದ್ರ ಅವರು ಮಧ್ಯವರ್ತಿಗಳ ಹಾವಳಿ ತಪ್ಪಬೇಕು, ಅಲ್ಲದೆ ಭಕ್ತರಿಗೆ ನೇರದರ್ಶನ ಸೇವೆಗಳು ಲಭ್ಯವಾಗಬೇಕು ಎಂದು ಸುದ್ದಿಗಾರರೊಂದಿಗೆ ಮಾತನಾಡಿದರು. ಕರ್ನಾಟಕ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾದ ಪಲ್ಲವಿ ಆಕುರಾತಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆ.ಪಿ.ಪಿ/

# ಜವಳಿ ಕ್ಷೇತ್ರಕ್ಕೆ 1300 ಕೋಟಿ ಬಂಡವಾಳ ಹೂಡಿಕೆ– ಬಾಬುರಾವ್ ಚಿಂಚನಸೂರು

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ರಾಜ್ಯದ ಕರ್ನಾಟಕ ನೂತನ ಜವಳಿ ನೀತಿ ಜಾರಿಯಾದ ನಂತರ ಈವರೆಗೆ 1300 ಕೋಟಿ ರೂ ಖಾಸಗಿ ಬಂಡವಾಳ ಹೂಡಿಕೆಯಾಗಿದ್ದು, 50 ಸಾವಿರ ಉದ್ಯೋಗ ಸೃಷ್ಠಿಯಾಗಿದೆ. ಸರ್ಕಾರದ ವತಿಯಿಂದ 200 ಕೋಟಿ ಪ್ರೋತ್ಸಾಹ ಧನ ನೀಡಲಾಗಿದೆ ಎಂದು ಜವಳಿ ಹಾಗೂ ಬಂದರು ಸಚಿವರಾದ ಬಾಬುರಾವ್ ಚಿಂಚನಸೂರು ಅವರು ತಿಳಿಸಿದರು.

ವಿಧಾನ ಸೌಧದ ಸಚಿವರ ಕಚೇರಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ವಸ್ತ್ರ ಭಾಗ್ಯ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬದ ಸದಸ್ಯರಿಗೆ ಪ್ರಮುಖ ಎರಡು ಅಥವಾ ಮೂರು ಹಬ್ಬಗಳಲ್ಲಿ ಮಹಿಳೆಯರಿಗೆ ಸೀರೆ ಕುಪ್ಪಸ, ಪುರಷರಿಗೆ ಪಂಚೆ, ಶರ್ಟ್ ನೀಡುವ ಯೋಜನೆಯನ್ನು ಮುಂದಿನ ಸಾಲಿನಿಂದ ನೀಡುವ ಉದ್ದೇಶ ಹೊಂದಲಾಗಿದ್ದು, ಈ ಯೋಜನೆಗೆ ಸುಮಾರು 100 ಕೋಟಿ ಹಣ ಬೇಕಾಗಬಹುದಾಗಿದ್ದು, ಮುಂದಿನ ಬಜೆಟ್ ನಲ್ಲಿ ಘೋಷಣೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಜವಳಿ ಇಲಾಖೆಯಲ್ಲಿ ಕ್ರಾಂತಿಕಾರಕ ಸರ್ಕಾರವನ್ನು ತೆಗೆದುಕೊಳ್ಳಲಾಗಿದ್ದು, ಮುಂದಿನ ಐದು ವರ್ಷಗಳಲ್ಲಿ 5 ಲಕ್ಷ ಗ್ರಾಮಾಂತರ ಜನರಿಗೆ ಉದ್ಯೋಗ ಅವಕಾಶ, ಸುಮಾರು 10 ಸಾವಿರ ಕೋಟಿ ಬಂಡವಾಳ ಹೂಡಿಕೆಗೆ ಕ್ರಮಕೈಗೊಳ್ಳಲಾಗಿದೆ ಎಂದ ಸಚಿವರು, ಯಾದಗಿರಿ ಜಿಲ್ಲೆಯ ಕಡೇಚೂರ್ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಮೂಲಭೂತ ಸೌಲಭ್ಯಗಳುಳ್ಳ ಜವಳಿಪಾರ್ಕ್ ಸ್ಥಾಪನೆಗೆ ಒಂದು ಸಾವಿರ ಎಕರ ಭೂಮಿಯನ್ನು ಕಾಯ್ದಿರಿಸಲಾಗಿದ್ದು, ಚಾಮರಾಜನಗರ, ಶಿರಾ ಮತ್ತು ಬಳ್ಳಾರಿ ಜಿಲ್ಲೆಯ ಕುಡುತಿನಿ ಸ್ಥಳಗಳಲ್ಲಿ 500 ಎಕರೆ ಪ್ರದೇಶಗಳಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ ಎಂದರು.

ಮುಂದಿನ 3 ವರ್ಷಗಳಲ್ಲಿ ಆಧುನಿಕ ಯಂತ್ರೋಪಕರಣಗಳನ್ನೊಳಗೊಂಡ ಸಿದ್ದ ಉಡುಪು ತಯಾರಿಕಾ ಘಟಕಗಳನ್ನು ಶೇಕಡ 50 ರಷ್ಟು ಸಹಾಯಧನದೊಂದಿಗೆ ಸ್ಥಾಪಿಸಲು ಉದ್ದೇಶಿಸಲಾಗಿದೆ, ಅಲ್ಲದೆ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ 10 ಕೋಟಿ ವೆಚ್ಚದಲ್ಲಿ ಗುರುವಿಟ್‌ಕಲ್‌ನಲ್ಲಿ ಎರಡು ಎಕರೆ ಪ್ರದೇಶದಲ್ಲಿ ಹೈಟೆಕ್ ಪವರ್‌ಲೂಮ್ ಪಾರ್ಕ್ ಸ್ಥಾಪಿಸಲಾಗುವುದು ಎಂದರು.

ಕೆ.ಪಿ.ಪಿ/